# ಕರ್ನಾಟಕ ವಿಧಾನ ಪರಿಷತ್ತು

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 830

2] ಮಾನ್ಯ ಸದಸ್ಯರ ಹೆಸರು : ಶ್ರೀ ಸಲೀಂ ಅಹ್ಮದ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3] ಉತ್ತರಿಸುವ ದಿನಾಂಕ : 26/12/2022

4] ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಉತ್ತರ ಕರ್ನಾಟಕದ ವಾಣಿಜ್ಯ ನಗರಿಯಾದ ಹುಬ್ಬಳ್ಳಿಯಲ್ಲಿರುವ ಟ್ರಾಫಿಕ್ ಠಾಣೆಗಳ ಸಂಖ್ಯೆ ಎಷ್ಟು; ಈ ಠಾಣೆಗಳಲ್ಲಿ ಕೆಲಸವನ್ನು ನಿರ್ವಹಿಸುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; | ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಪ್ರಸ್ತುತ 04 ಸಂಚಾರ ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿದ್ದು, ಠಾಣೆಗಳ ವಾಸ್ತವ ಬಲದ ವಿವರ ಕೆಳಕಂಡಂತಿದೆ. |

| ಠಾಣೆ ಹೆಸರು | ಪಿಐ | ಪಿಎಸ್ಐ | ಎಸ್ಐ/ ಮಎಎಸ್ಐ | ಸಿಹೆಚ್‌ಸಿ/ ಮಹೆಚ್‌ಸಿ | ಸಿಪಿಸಿ/ ಮಪಿಸಿ | ಒಟ್ಟು |
|---|---|---|---|---|---|---|
| ಹುಬ್ಬಳ್ಳಿ ಉತ್ತರ ಸಂಚಾರ | 1 | 2 | 9 | 23 | 39 | 74 |
| ಹುಬ್ಬಳ್ಳಿ ದಕ್ಷಿಣ ಸಂಚಾರ | 1 | 2 | 9 | 23 | 39 | 74 |
| ಹುಬ್ಬಳ್ಳಿ ಪೂರ್ವ ಸಂಚಾರ | 1 | 1 | 9 | 22 | 41 | 74 |
| ಧಾರವಾಡ ಸಂಚಾರ | 1 | 2 | 9 | 22 | 41 | 75 |
| ಒಟ್ಟು | 4 | 7 | 36 | 90 | 160 | 297 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಕಳೆದ 5 ವರ್ಷಗಳಲ್ಲಿ ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಸಂಭವಿಸಿದ ಅಪಘಾತಗಳ ಸಂಖ್ಯೆ ಮತ್ತು ಅಪಘಾತಗಳಲ್ಲಿ ಮೃತರಾದವರ ಸಂಖ್ಯೆ ಎಷ್ಟು; | ಕಳೆದ 05 ವರ್ಷಗಳಲ್ಲಿ ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಸಂಭವಿಸಿರುವ ಅಪಘಾತ ಪ್ರಕರಣಗಳ ಸಂಖ್ಯೆ ಹಾಗೂ ಮೃತಪಟ್ಟವರ ಸಂಖ್ಯೆ ಕೆಳಕಂಡಂತಿದೆ. |

| ವರ್ಷ | ಅಪಘಾತಗಳ ಸಂಖ್ಯೆ | ಅಪಘಾತಗಳಲ್ಲಿ ಮೃತರಾದವರ ಸಂಖ್ಯೆ |
|---|---|---|
| 2018 | 370 | 90 |
| 2019 | 430 | 92 |
| 2020 | 342 | 93 |
| 2021 | 428 | 112 |
| 2022 (30.11.2022 ರವರೆಗೆ) | 467 | 104 |
| ಒಟ್ಟು | 2037 | 491 |

| | | |
|---|---|---|
| ಇ) | ಪ್ರಸ್ತುತ, ಹುಬ್ಬಳ್ಳಿಗೆ ರಾಜ್ಯಾದಾದ್ಯಂತ ಸಾವಿರಾರು ಜನರು ದಿನನಿತ್ಯ ವಾಹನಗಳಲ್ಲಿ ಬರುತ್ತಿದ್ದು, ಈ ರೀತಿ ಪ್ರಯಾಣಿಕರಿಗೆ/ಅವರ ವಾಹನಗಳ ಅನುಗುಣವಾಗಿ ಸಂಚಾರಿ ಪೊಲೀಸ್ ಠಾಣೆಗಳು ಮತ್ತು ಸಿಬ್ಬಂದಿಗಳು ಇಲ್ಲದಿರುವ ಕಾರಣ ಜನರಿಗೆ ಸಮಸ್ಯೆಯಾಗಿದ್ದು, ಈ ಸಮಸ್ಯೆಯನ್ನು ನಿವಾರಿಸಲು ಈ ಪ್ರದೇಶದಲ್ಲಿ ಹೆಚ್ಚಿನ ಸಂಚಾರಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ, ಹೆಚ್ಚಿನ ಸಂಚಾರಿ ಪೊಲೀಸ್ ಠಾಣೆಗಳನ್ನು ತೆರೆಯುವುದು ಸಮಂಜಸವಲ್ಲವೇ? | ಹುಬ್ಬಳ್ಳಿಯಲ್ಲಿ ಮುಖ್ಯ ರಸ್ತೆಗಳಾದ ಹಳೇ ಬಸ್ ನಿಲ್ದಾಣ, ಗೋಕುಲ್‌ರೋಡ್, ಹೊಸೂರು ಜಂಕ್ಷನ್, ಐಟಿ ಪಾರ್ಕ್‌ಗಳಲ್ಲಿ ಫ್ಲೈಓವರ್ ಕಾಮಗಾರಿ ಹಾಗೂ ಕಾರವಾರ ರೋಡ್‌ನಲ್ಲಿ ರಸ್ತೆ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಹಾಗೂ ಹಾಲಿ ವಾಹನಗಳ ಸಂಖ್ಯೆ ಹೆಚ್ಚಾಗಿದ್ದು, ಸುಗಮ ಸಂಚಾರಕ್ಕೆ ಅಡಚಣೆಯಾಗುತ್ತಿದೆ. ಸದರಿ ಕಾಮಗಾರಿಗಳು ಪೂರ್ಣಗೊಂಡ ನಂತರ ಸುಗಮ ಸಂಚಾರಕ್ಕೆ ಅನುಕೂಲವಾಗಲಿದೆ. ಮುಂದುವರೆದಂತೆ, ಪ್ರಸ್ತುತ ಘಟಕಕ್ಕೆ ನೇಮಕಗೊಂಡ ಪೊಲೀಸ್ ಸಿಬ್ಬಂದಿಗಳು ತರಬೇತಿಯಲ್ಲಿದ್ದು, ತರಬೇತಿಯಿಂದ ಬಂದ ಬಳಿಕ ಸುಗಮ ಸಂಚಾರ ನಿರ್ವಹಣೆಗಾಗಿ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ. |

**ಸಂಖ್ಯೆ: ಹೆಚ್‌ಡಿ 184 ಪಿಓಪಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು.